206 (24) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಎ ಪಿ ಎಲ್/ಬಿ ಪಿ ಎಲ್ ಅಂತ್ಯೋದಯ ಮತ್ತು ಅನ್ನಪೂರ್ಣ ಕುಟುಂಬ ಪಡಿತರ ಚೀಟಿ ವಿತರಣೆಗೆ ನಗಧಿಪಡಿಸಿರುವ ಮಾನದಂಡಗಳೇನು,

ಆ) ಉಡುಪಿ ಜಿಲ್ಲೆಯ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ವಿತರಣೆ ಮಾಡಿರುವ (ವಿವಿಧ ಯೋಜನೆಗಳ) ಕುಟುಂಬ ಪಡಿತರ ಚೀಟಿಗಳ ಸಂಖ್ಯೆ ಎಷ್ಟು,

ಇ) ಗ್ರಾಮಂತರ ಮತ್ತು ಪಟ್ಟಣ ಪ್ರದೇಶಗಳಿಗೆ ಸಮಾನವಾಗಿ ಮಾನದಂಡಗಳನ್ನು ವಿಧಿಸಲಾಗಿದೆಯೇ (ಪಟ್ಟಣ ಪಂಚಾಯತ್ ಸೇರಿದಂತೆ ಮಾಹಿತಿ ನೀಡುವುದು)

ಈ) ಪಡಿತರ ಚೀಟಿ ವಿತರಣೆ ಮಾಡುವ ಕಾರ್ಯ ಪೂರ್ಣ ಗೊಳಿಸಲಾಗಿದೆಯೇ,

ಉ) ಪಡಿತರ ಚೀಟಿಗಳನ್ನು ಗಣಕೀಕೃತಗೊಳಿಸಿದ್ದು, ಇದರಲ್ಲಿ ಉಂಟಾದ ಲೋಪದೋಷಗಳನ್ನು ಸರಿಪಡಿಸಿ ವಿತರಣೆಗೆ ತೆಗೆದುಕೊಂಡ ಕ್ರಮವೇನು ಮತ್ತು ಕಾಲಾವಧಿ ಏಷ್ಟು?

ಶ್ರೀ ಗೋವಿಂದ ಎಂ ಕಾರ್ಜೋಳ

ಅ) ಅನ್ನಪೂರ್ಣ, ಎಎವೈ, ಅಕ್ಷಯ ಮತ್ತು ಎಪಿಎಲ್ ಪಡಿತರ ಚೀಟಿಗಳನ್ನು ಗುರುತಿಸಲು ಅಳವಡಿಸಿರುವ ಮಾನದಂಡಗಳು ಕೆಳಕಂಡುತರುತ್ತದೆ –

ಅನ್ನಪೂರ್ಣ ಯೋಜನೆಯಡಿಯಲ್ಲಿ 65 ವರ್ಷ ಅಥವಾ ಅದಕ್ಕಿಂತ

ಹೆಚ್ಚಿನ ವಯೋಮಿತಿಯುಳ್ಳ ನಿರ್ಗತಿಕ ಹಾಗೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ವೃದ್ಧಾಪ್ಯ ವೇತನವನ್ನು ಪಡೆಯದೇ ಇರುವಂತಹ ವ್ಯಕ್ತಿಗಳು ಈ ಯೋಜನೆಯಡಿಯಲ್ಲಿ ಪಡಿತರ ಚೀಟಿಯನ್ನು ಪಡೆಯಲು ಅರ್ಹರಾಗಿರುತ್ತಾರೆ

ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡುಬಡವರು ಅಂದರೆ ಕೃಷಿ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ವಿಧವೆಯರು ಮುಖ್ಯಸ್ಥರಾಗಿರುವ ಕುಟುಂಬ, ಸಾಮಾಜಿಕ ನೆರವಿಲ್ಲದ ವಯೋವೃದ್ಧ ಅಂಗವಿಕಲರು ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಫಲಾನುಭವಿಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅನರ್ಹರು

(1) ಮೂರು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು

(2) ಸ್ಥಿರ ದೂರವಾಣಿ ಹೊಂದಿರುವವರು

(3) ಸ್ವಂತವಾಗಿ ಯಾರೇ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 100 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು,

(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು

(6) ತಿಂಗಳಿಗೆ ರೂ 1 000/ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು

(8) ರಿಜಿಸ್ಟರ್ಡ್ ಕಾಂಟ್ರಾಕ್ಟರ್,ಎಪಿಎಂಪಿ ಟ್ರೇಡರ್ಸ್/ ಕಮೀಷನ್ ಏಜೆಂಟ್ಸ್/ Dealers in Seeds/Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡಿ ನಿರ್ಣಯಿಸುವುದು

ತದನಂತರ ನೀಡಿದ ನಗರ ಪ್ರದೇಶಕ್ಕೆ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ

1) 20' * 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನವೇಶನ ಅಥವಾಸರ್ಕಾರದ ಯಾವುದೇ ಗೃಹ ನರ್ಮಾಣ ಬಿಪಿಎಲ್ ಗೆ ಒಳಪಟ್ಟಿರುವರೆಂದು ಪರಿಗಣಿಸುವುದು

2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು

3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000–ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/–ರೂ ಗಳ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ ಗರಿಷ್ಟ 17,000/– ರೂ ಗಳ ವಾರ್ಷಿಕ ವರಮಾನ ಆದಾಯವುಳ್ಳ ಕುಟುಂಬಗಳಿಗೆ ಎಪಿಎಲ್ ಪಡಿತರ ಚೀಟಿಯನ್ನು ವಿತರಿಸಲಾಗಿರುತ್ತದೆ

ಆ) ಉಡುಪಿ ಜಿಲ್ಲೆಯ ವಿದಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿ ವಿತರಣೆ ಮಾಡಿರುವ ಪಡಿತರ ಚೀಟಿಗಳ ವಿವರಗಳ ಈ ಕೆಳಕಂಡಂತ್ತಿದೆ –

ತಾಲ್ಲೂಕು	ವಿಧಾನಸಭಾ ಕ್ಷೇತ್ರದ ಹೆಸರು	ಅನ್ನ ಪೂರ್ಣ	ಎಎವೈ	ಅಕ್ಷಯ (ಬಿಪಿಎಲ್)	ಎಪಿಎಲ್	ಒಟ್ಟು
ಕುಂದಾಪುರ	ಬೈಂದೂರು ವಿಧಾನಸಭಾ ಕ್ಷೇತ್ರ	71	3746	19587	14893	38297
ಕಾರ್ಕಳ	ಕಾರ್ಕಳ ವಿಧಾನಸಭಾ ಕ್ಷೇತ್ರ	0	3840	15604	16860	36304
ಉಡುಪಿ	ಬ್ರಹ್ಮಾವರ ವಿಧಾನಸಭಾ ಕ್ಷೇತ್ರ	109	3223	18850	15975	38157
ಉಡುಪಿ	ಉಡುಪಿ ವಿಧಾನಸಭಾ ಕ್ಷೇತ್ರ	92	1248	7827	25918	35085
ಕುಂದಾಪುರ	ಕುಂದಾಪುರ	48	3114	16247	14931	34340
ಉಡುಪಿ	ವಿಧಾನಸಭಾ ಕ್ಷೇತ್ರ	3	319	1569	958	284
	ಒಟ್ಟು	**51**	**3433**	**17816**	**15889**	**37189**
ಕುಂದಾಪುರ	ಕಾಪು	0	536	1746	2368	4650
ಉಡುಪಿ	ವಿಧಾನಸಭಾ ಕ್ಷೇತ್ರ	65	1829	8267	16424	26585
	ಒಟ್ಟು	**65**	**2365**	**10013**	**18792**	**31235**
	ಜಿಲ್ಲೆಯ ಒಟ್ಟು ಪಡಿತರ ಚೀಟಿಗಳು	**388**	**17855**	**89697**	**108327**	**216267**

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ ರೂ 12,000/–ಕ್ಕಿಂತ ಕಡಿಮೆ ವಾರ್ಷಿಕ ಆಧಾಯವುಳ್ಳ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿಯನ್ನು ವಿತರಿಸಲಾಗುತ್ತದೆ

ಈ) ತಾತ್ಕಾಲಿಕ ಪಡಿತರ ಚೀಟಿ ಹಾಗೂ ಎಪಿಎಲ್ ನಿಂದ ಬಿಪಿಎಲ್ ಗೆ ವರ್ಗ ಬದಲಾವಣೆಯಲ್ಲಿ ಅರ್ಹರೆಂದು ಗುರುತಿಸಲಾದ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್ ಗಳನ್ನು ವಿತರಣೆ ಮಾಡಲಾಗಿದೆ

ಉ) ಸಮೀಕ್ಷಾ ಸಮಯದಲ್ಲಿ ಬಿಟ್ಟು ಹೋದ ಹಾಗೂ ಬೇರ್ಪಟ್ಟ ಕುಟುಂಬಗಳು ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಸಲ್ಲಿಸಿದ್ದು, ಇವುಗಳನ್ನು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು ತದನಂತರ ಖಾಯಂ ಗಣಕೀಕೃತ ಪಡಿತರೆ ಚೀಟಿ ನೀಡುವ ಕಾರ್ಯ ಆರಂಬಿಸಲಾಗುತ್ತಿದ್ದು ಅ ಸಂದರ್ಭದಲ್ಲಿ ಬೇರೆ ತಿದ್ದುಪಡಿಗಳನ್ನು ಸರಿಪಡಿಸಿ ನೀಡಲಾಗುವುದು

ದೇವಸ್ಥಾನಗಳಿಗೆ ಅನುದಾನ ಬಿಡುಗಡೆ

207(410) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)

ಮಾನ್ಯ ಮೀನುಗಾರಿಕಾ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) 1) 2006–07 ಮತ್ತು 2007–08ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆ ಮಡಿದ ಅನುದಾನವೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು)

2) 2007–08 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು)

ಶ್ರೀ ಬಿ ನಾಗರಾಜಶೆಟ್ಟಿ

1) 2006–07 ಮತ್ತು 2007–08ನೇ ಸಾಲಿನಲ್ಲಿ ಈ ಯೋಜನೆ ಅಡಿಯಲ್ಲಿ ರೂ 1120 00 ಲಕ್ಷ ಅನುದಾನ ಬಿಡುಗಡೆ ಮಾಡಿದೆ (ಕ್ಷೇತ್ರವಾರು ವಿವರಗಳನ್ನು <u>ಅನುಬಂಧ–1ರ</u>ಲ್ಲಿ ಒದಗಿಸಿದೆ)